**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 19.11.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿಯರ ಪರವಾಗಿ ಶ್ರೀ.ಎಸ್.ಸಿ.ಯು. ವಕೀಲರಿಂದ.**

ನಾನು ಸಾಕ್ಷಿದಾರ ಇದ್ದು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದರ ವಿಚಾರಗಳನ್ನು ನಾನೇ ಹೇಳಿ ಬರೆಸಿದ್ದು, ಅದರಲ್ಲಿ ಬರೆದ ವಿಚಾರಗಳು ಸತ್ಯವಾಗಿರುತ್ತದೆ.

**ನಿಪಿ-40 ಃ** ಕಳೆದ 4-6 ತಿಂಗಳಿಂದ ವಾದಿಯರ ಮತ್ತು ಯಾದವಾಡ ಗ್ರಾಮದ ಕುಟುಂಬಗಳಿಗೆ ಸಂಬಂಧಪಟ್ಟಂತೆ ಇರುವ ಮಾಹಿತಿ ಪುಸ್ತಕ

**ನಿಪಿ-40(ಎ) ಃ** ವಾದಿಯರ ಕುಟುಂಬಕ್ಕೆ ಸಂಬಂಧಪಟ್ಟಂತಹ 4 ಪುಟಗಳ ಮಾಹಿತಿ

**ಪಾಟೀ ಸವಾಲುಃ ಪ್ರತಿವಾದಿ 2, 6 ರಿಂದ 9 ರವರ ಪರವಾಗಿ ಶ್ರೀ. ಎಚ್.ಎ.ಕೆ. ವಕೀಲರಿಂದಃ**

ನಾನು ಶಾಲೆ ಕಲಿತಿರುವುದಿಲ್ಲ, ನನಗೆ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-40 ರ ದಾಖಲೆಯಲ್ಲಿನ ಬರಹವಾದ ನಿಪಿ-40(ಎ) ಬರಹವು ನನ್ನ ಅಣ್ಣ ಬಾಲಪ್ಪ ಎಂಬುವವನು ಬರೆದಿರುವನು. ಈ ಮಾಹಿತಿಯನ್ನು ಯಾರ ಮಾಹಿತಿಯ ಮೇರೆಗೆಆತ ಈ ದಾಖಲೆಯಲ್ಲಿ ಬರೆದಿರುವನು ಎಂಬುದರ ಬಗ್ಗೆ ನಿನಗೆ ಗೊತ್ತಿರುವುದಿಲ್ಲ ಎಂದರೆ ಸಾಕ್ಷಿ ನುಡಿಯುವುದೇನೆಂದರೆ ತನ್ನ ಅಜ್ಜ ಮತ್ತು ಮುತ್ತಜ್ಜರ ಕಾಲದಿಂದ ಬರೆದುಕೊಂಡು ಬಂದಿರುವರು ಎಂದು ಉತ್ತರಿಸಿರುವರು. ನನ್ನ ತಂದೆ ಜೀವಂತವಾಗಿರುವರು. ನಮ್ಮ ಸ್ವಂತ ಊರು ಗೋಕಾಕ ತಾಲೂಕಿನ ತಳಕಟನಾರ ಗ್ರಾಮದವರು ಎಂದರೆ ಸರಿಯಲ್ಲ. ಯಾದವಾಡ ಗ್ರಾಮದವರು ಎಂದು ಸಾಕ್ಷಿ ಉತ್ತರಿಸಿರುವರು. ಯಾದವಾಡ ಗ್ರಾಮದಲ್ಲಿ ನನಗಾಗಲೀ ನಮ್ಮ ಮನೆತನಕ್ಕಾಗಲೀ ಯಾವುದೇ ಆಸ್ತಿಗಳು ಇರುವುದಿಲ್ಲ ಎಂದರೆ ಸರಿ. ನಾನು ಯಾದವಾಡ ಗ್ರಾಮದವನು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಿಪಿ-40 ರ ದಾಖಲಾತಿಗೆ ಸಂಬಂಧಪಟ್ಟಂತೆ ನನ್ನ ತಂದೆ ಅಜ್ಜ ಮುತ್ತಜ್ಜರ ಕಾಲದಿಂದಲೂ ಮಾಡಿಕೊಂಡು ಬಂದಿರುವರು. ನಿಪಿ-40 ರ ದಾಖಲೆಯಲ್ಲಿನ ಮಾಹಿತಿಯನ್ನು ಕಲ್ಯಾಣಿ ಅವರ ಕುಟುಂಬದ ಸದಸ್ಯರು ನೀಡಿರುವ ಮಾಹಿತಿಯ ಮೇರೆಗೆ ಬರೆದಿರುವರು. ಆದರೆ ಯಾವ ಸದಸ್ಯರು ಮಾಹಿತಿ ನೀಡಿರುವರು ಎಂಬುದರ ಬಗ್ಗೆ ನನಗೆ ಮಾಹಿತಿ ನೀಡಲು ಬರುವುದಿಲ್ಲ. ನಿಪಿ-40 ರ ದಾಖಲೆಯಲ್ಲಿ ಬರೆದಿರುವಂತಹ ಮಾಹಿತಿ ಸುಮಾರು 20 ವರ್ಷಗಳ ಹಳೆಯದಾಗಿರುವದು. ಈಗ

ನನಗೆ ಸುಮಾರು 30-40 ವರ್ಷಗಳಾಗಿರಬಹುದು. ನಿಪಿ-40 ರ ದಾಖಲೆಯಲ್ಲಿ ಸುಮಾರು 300-400 ಮನೆತನಗಳ ಮಾಹಿತ ಇರುವದು. ಈ ದಾಖಲೆಯಲ್ಲಿ ಈ ಎಲ್ಲಾ ಕುಟುಂಬಗಳ ಮಾಹಿತಿಯ ಬಗ್ಗೆ ಫೋಟೋಗಳನ್ನು ಹಚ್ಚೇ ಬರೆದಿರುವೇವು. ನಿಪಿ-40 ರ ದಾಖಲೆಯಲ್ಲಿ ಆ ಕುಟುಂಬದ ಸದಸ್ಯರಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲೆಯನ್ನುಪರಿಶೀಲಿಸುವುದಿಲ್ಲ. ಆದರೆ ಆ ಕುಟುಂಬದ ವ್ಯಕ್ತಿಗಳ ಮಾಹಿತಿಯ ಮೇರೆಗೆ ಹೇಳಿದಂತೆ ಬರೆಯುತ್ತೇವೆ. ಈ ದಾವೆಯಲ್ಲಿ ನ್ಯಾಯಾಲಯದಿಂದ ಸಮನ್ಸು ಬಂದಿದ್ದು ಅದನ್ನು ನಾನು ಬೇರೆ ಊರಿನಲ್ಲಿ ಇರುವುದರಿಂದ ಅದನ್ನು ಪಡೆದುಕೊಂಡಿರುವುದಿಲ್ಲ. ಈ ದಿನ ನನ್ನನ್ನು ನ್ಯಾಯಾಲಯಕ್ಕೆ 2 ನೇ ವಾದಿಯವರು ಕರೆದುಕೊಂಡು ಬಂದಿರುವರು.

ನನ್ನ ಸಾಕ್ಷ್ಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಬರೆಸಿಹಾಕಲು ವಾದಿ 2 ರವರೇ ಮಾಹಿತಿ ನೀಡಿರುವರು ಎಂದರೆ ಸರಿಯಲ್ಲ. ನಿಪಿ-40 ರ ದಾಖಲೆಯಲ್ಲಿ ವಾದಿ 2 ರವರ ಕುಟುಂಬಕ್ಕೆ ಸಂಬಂಧಪಟ್ಟಂತೆ ಬರೆದಿರುವ ಮಾಹಿತಿ ತಪ್ಪಾಗಿರುವದು ಎಂದರೆ ಸರಿಯಲ್ಲ. ಕಲ್ಯಾಣಿ ಅವರ ಮನೆತನಕ್ಕೆ ವರ್ಷದಲ್ಲಿ ಒಂದು ಬಾರಿ ಮಾತ್ರ ಹೋಗುತ್ತೇವೆ. ನಾನು 2024 ರ ದೀಪಾವಳಿ ಹಬ್ಬ ಆದ ನಂತರ ವಾದಿ 2 ರವರ ಮನೆಗೆ ಹೋಗಿರುವೇನು. ನಾನು ಯಾವುದೇ ಕಾಲಕ್ಕೂ ಕಲ್ಯಾಣಿ ಅವರ ಮನೆತನಕ್ಕೆ ಹೋಗಿರುವುದಿಲ್ಲ ಮತ್ತು ನಿಪಿ-40(ಎ) ಮಾಹಿತಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ 2 ರವರ ಮಾತುಕೇಳಿಕೊಂಡು ನಿಪಿ-40 ರ ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿದ್ದೇನೆಂದರೆ ಸರಿಯಲ್ಲ. ಈ ನಿಪಿ-40 ರ ದಾಖಲೆಯಲ್ಲಿನ ಮಾಹಿತಿಯನ್ನು ಮೊದಲಿನಿಂದಲೂ ನಮ್ಮ ತಂದೆ ಮಾಡಿಕೊಂಡು ಬಂದಿರುವರು ಎಂದರೆ ಸರಿಯಲ್ಲ. ನಿಪಿ-40 ರ ದಾಖಲೆಯನ್ನು ನಮ್ಮ ಅಜ್ಜ ಮುತ್ತಜ್ಜ ತಯಾರು ಮಾಡಿರುವ ಪುಸ್ತಕದಿಂದ ಈ ದಾಖಲೆ ತಯಾರು ಮಾಡಿರುವೇವು. ನಿಪಿ-40 ರ ದಾಖಲೆ ನನ್ನ ಅಜ್ಜ ಮುತ್ತಜ್ಜ ಬರೆದಿರುವಂತಹ ಪುಸ್ತಕ ಅಲ್ಲ ಎಂದರೆ ಸರಿ.

ನನ್ನ ಅಜ್ಜ ಮುತ್ತಜ್ಜ ಬರೆದಿರುವಂತಹ ಪುಸ್ತಕದ ದಾಖಲೆಯನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಹೆಳವರ ವೃತ್ತಿಗೆ ಸಂಬಂಧಪಟ್ಟಂತೆ ಸರ್ಕಾರದಿಂದಾಗಲೀ ಸರ್ಕಾರದ ಯಾವುದೇ ಇಲಾಖೆಯಿಂದಾಗಲೀ ಯಾವುದೇ ಆದೇಶವಿರುವುದಿಲ್ಲ್ಎಂದರೆ ಸರಿ. ಆದರೆ ಬಸವಣ್ಣನವರ ಕಾಲದಿಂದಲೂ ಈ ವೃತ್ತಿ ನಡೆದುಕೊಂಡು ಬಂದಿರುವದು. ನಾನು ಕಲ್ಯಾಣಿ ಅವರ

ಮನೆತನಕ್ಕೆ ಮನೆತನದ ಹೆಳವನಾಗಿರುತ್ತೇನೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿ 2 ರವರ ಮಾತುಕೇಳಿಕೊಂಡು ನಾನು ಮತ್ತು ನನ್ನ ಸಹೋದರ ನಿಪಿ-40 ಮತ್ತು ನಿಪಿ-40 (ಎ) ಸೃಷ್ಟಿಮಾಡಿದ್ದೇವೆಂದರೆ ಸರಿಯಲ್ಲ. ನಿಪಿ-40(ಎ) ದಲ್ಲಿ ಹೇಳಿರುವಂತೆ ಮೂಲಪುರುಷ ಸಿದ್ದಪ್ಪನಿಗೆ ವಾದಿ 3 ಹೆಂಡತಿ ಮತ್ತು ವಾದಿ 1 ಮತ್ತು 2 ರವರು ಮಕ್ಕಳು ಅಂತಾ ತಪ್ಪಾಗಿ ತೋರಿಸಿದ್ದೇವೆಂದರೆ ಸರಿಯಲ್ಲ. ನಿಪಿ-40 ರ ದಾಖಲೆಯಲ್ಲಿ ಕುಟುಂಬದ ಮಾಹಿತಿ ನೀಡಿದವರ ಸಹಿಗಳನ್ನು ಪಡೆದುಕೊಳ್ಳುತ್ತೇವೆ. ನಿಪಿ-40 ರ ದಾಖಲೆಯಲ್ಲಿ ವಾದಿ 2 ರವರ ಅಣ್ಣತಮ್ಮಂದಿರ ಸಹಿಗಳು ಇರುವವು.

ವಾದಿ 2 ರವರ ಮನೆಗೆ ವರ್ಷಕ್ಕೆ ಒಂದು ಬಾರಿ ಹೋಗಿರುತ್ತೇನೆ ಆ ಸಮಯದಲ್ಲಿ ಅವರ ಸಹಿ ಪಡೆದುಕೊಂಡಿರುತ್ತೇನೆ. ನಿಪಿ-40 ರ ದಾಖಲೆಯಲ್ಲಿ ವಾದಿ 2 ರವರು ಸುಮಾರು 1 ವರ್ಷಗಳ ಹಿಂದೆ ಸಹಿ ಮಾಡಿರವರು. ಉಳಿದ ಪ್ರತಿವಾದಿಯರಿಗೆ ತೊಂದರೆ ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಪ್ರತಿವಾದಿ 10 ರವರ ಪರ ವಕೀಲರು ಈ ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುವರು.

ಮರು ವಿಚಾರಣೆಃ
ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ